**Best Compliments From :**

Rtn. Harish M.

**AMRITH GARDEN**



Near LVT Temple,

Ambagilu, Santhekatte

Udupi Dist-576 105

**Best Compliments From :**

Rtn. Arun Kumar
Project Director

Mob.: +91 - 9448287341

Phone No. : 0820-2574900

**UDUPI NIRMITHI KENDRA**

ALN Layout, Ananthanagara, Manipal

Udupi Taluk & Dist.

E-mail : arununk@yahoo.co.in   Office email : udupinirmithikendra@gmail.com

**Best Compliments From :**

**Rtn. PHF GIRIDHAR BALIGA**






Manufacturers of
**QUALITY FISH NETS**

NEJAR, UDUPI DIST.
Tel: 0820-2580095, Mobile: 9845242995




## REPORT

**Rtn. SATHEESH SHERIGAR**
**Secretary**

**Activity Report: 03rd July 2025 – 30th October 2025**

**ರೋಟರಿ ಕ್ಲಬ್ ಕಲ್ಯಾಣಪುರ – 2025–26ನೇ ಸಾಲಿನ ಸೇವಾ ಚಟುವಟಿಕೆಗಳ ಒಂದು ಪಕ್ಷಿನೋಟ :**

- **2025-26 ಸಾಲಿನ ಪದಪ್ರಧಾನ ಸಮಾರಂಭವು** 03 ಜುಲೈ 2025 ಅಮೃತ್ ಗಾರ್ಡನ್‌ನಲ್ಲಿ ಭವ್ಯವಾಗಿ ಮತ್ತು ವಿಜಯೋತ್ಸವದ ಮನೋಭಾವದೊಂದಿಗೆ ಆಯೋಜಿಸಲಾಯಿತು. ಈ ವೇಳೆ, ಗೌರವಾನ್ವಿತ ರೋಟೇರಿಯನ್ ಶಶಿಕಾಂತ್ ನಾಯಕ್ ಮತ್ತು ರೋಟೇರಿಯನ್ ಸತೀಶ್ ಶೆರಿಗಾರ್ ತಮ್ಮ ನೂತನ ಪದವಿಗಳನ್ನು ಗೌರವದಿಂದ ಸ್ವೀಕರಿಸಿದರು.
- 2025ರ **ಜುಲೈ 4ರಂದು** ನಮ್ಮ ರೋಟರಿ ಕ್ಲಬ್ ವತಿಯಿಂದ ಸಂತ ಜೋಸೆಫ್ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕಗಳು ಮತ್ತು ಯೂನಿಫಾರ್ಮ್‌ಗಳನ್ನು ವಿತರಿಸುವ ಮೂಲಕ ಶ್ಲಾಘನೀಯ ಹಾಗೂ ಸಮಾಜಮುಖಿ ಸೇವೆಯನ್ನು ನೆರವೇರಿಸಲಾಗಿದೆ.
- 2025ರ **ಜುಲೈ 9ರಂದು** ಟಿ.ಎಂ.ಎ. ಪೈ ಹೈಸ್ಕೂಲ್‌ನಲ್ಲಿ ಇಂಟರಾಕ್ಟ್ ಕ್ಲಬ್ ಸಹಯೋಗದೊಂದಿಗೆ ವನಮಹೋತ್ಸವವನ್ನು ಉತ್ಸಾಹದಿಂದ ಆಚರಿಸಲಾಯಿತು.
- 2025ರ **ಜುಲೈ 15ರಂದು** ನಡೆದ ನಮ್ಮ ರೋಟರಿ ಕ್ಲಬ್ ವಾರದ ಸಭೆಯಲ್ಲಿ ಗುರುಪೌರ್ಣಿಮೆಯ ಅಂಗವಾಗಿ ಲಕ್ಷ್ಮಿ ಟೀಚರ್ ಅವರಿಗೆ ಗೌರವ ಸಲ್ಲಿಸುವುದು ಕೃತಜ್ಞತೆಯ ಸುಂದರ ಮತ್ತು ಸಾರ್ಥಕ ಉದಾಹರಣೆ
- 2025ರ **ಜುಲೈ 26 ರಂದು** ಕಾರ್ಗಿಲ್ ವಿಜಯ ದಿವಸದ ಸ್ಮರಣಾರ್ಥವಾಗಿ, ದೇಶದ CRPF ದಳದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ **ಕೊಡವೂರು ನಿವಾಸಿ ಶ್ರೀ ದಾಮೋದರ ಬಂಗೇರರನ್ನು** ಅವರ ಪತ್ನಿಯವರೊಂದಿಗೆ ಅವರ ಸ್ವಗೃಹದಲ್ಲೇ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.
- 2025ರ **ಆಗಸ್ಟ್ 3 ರಂದು** ಅಮೃತ್ ಗಾರ್ಡನ್, ಉಡುಪಿ ಇಲ್ಲಿ **"ಆಟಿಡು ಒಂಜಿ ದಿನ"** ಕಾರ್ಯಕ್ರಮವನ್ನು **ತುಳುನಾಡು ಸಂಸ್ಕೃತಿಕ ವೈವಿಧ್ಯತೆಯೊಂದಿಗೆ** ಭವ್ಯವಾಗಿ ಆಚರಿಸಲಾಯಿತು.

- 2025 **ಆಗಸ್ಟ್ 11ರಿಂದ 17ರವರೆಗೆ** ಉಡುಪಿ ಅಂಬಾಗಿಲಿನ ಅಮೃತ್ ಗಾರ್ಡನ್‌ನಲ್ಲಿ ಲಯನ್ಸ್ ಕ್ಲಬ್ ಉಡುಪಿ ಅಮೃತ್, ರೋಟರಿ ಕ್ಲಬ್ ಕಲ್ಯಾಣಪುರ ಹಾಗೂ ಉಡುಪಿ–ಮಣಿಪಾಲದ ಆಸ್ಪತ್ರೆಗಳ ಸಂಯುಕ್ತ ಆಶ್ರಯದಲ್ಲಿ **ಆರೋಗ್ಯ ಸಪ್ತಾಹ ಆಯೋಜಿಸಲಾಯಿತು**. ಸುದ್ದಿಗೋಷ್ಠಿಯಲ್ಲಿ ಸಂಯೋಜಕ ವಿನಯಕುಮಾರ್ ಕಬ್ಯಾಡಿ ಮಾತನಾಡಿ, "ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಪ್ರತಿದಿನ ಉಚಿತ ತಪಾಸಣೆ ಹಾಗೂ ಮಾಹಿತಿ ಕಾರ್ಯಕ್ರಮಗಳು ನಡೆಯಲಿವೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ವಿನಂತಿಸುತ್ತೇವೆ," ಎಂದು ಹೇಳಿದರು.
- 2025 **ಆಗಸ್ಟ್ 15ರಂದು** ನಮ್ಮ ಕ್ಲಬ್‌ನಲ್ಲಿ **79ನೇ ಸ್ವಾತಂತ್ರ್ಯ ದಿನಾಚರಣೆ** ಸಪ್ತಾಹಿಕ ಸಭೆಯೊಂದಿಗೆ ಸಂತೋಷದಿಂದ ಆಚರಿಸಲಾಯಿತು. ಧ್ವಜಾರೋಹಣ ಮತ್ತು ರಾಷ್ಟ್ರಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಕ್ಲಬ್ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡರು.
- 2025 **ಆಗಸ್ಟ್ 15ರಂದು** ಆರೋಗ್ಯ ಸಪ್ತಾಹದ ಪಂಚಮ ದಿನ, **"ಸೇವೆಯ ಮೂಲಕ ಆರೋಗ್ಯವಂತ ಸಮಾಜ"** ಉದ್ದೇಶದೊಂದಿಗೆ ರಕ್ತದಾನ ಶಿಬಿರ ಮತ್ತು ರಕ್ತ ಮಾದರಿ ಪರೀಕ್ಷೆ ಕಾರ್ಯಕ್ರಮ ನಡೆಯಿತು. ಇದು ಸಾಮಾಜಿಕವಾಗಿ ಮಹತ್ವದ ಮತ್ತು ಸಾರ್ಥಕ ಕಾರ್ಯಕ್ರಮವಾಗಿ ಪರಿಣಮಿಸಿತು.
- 2025 **ಆಗಸ್ಟ್ 17 ರಂದು** ನಮ್ಮ ಆರೋಗ್ಯ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ಯೋಗ ಶಿಬಿರ ಯಶಸ್ವಿಯಾಗಿ **"ಸಂಪನ್ನವಾಯಿತು.** ಈ ಯಶಸ್ಸು ಎಲ್ಲರ ಸಹಕಾರದ ಫಲವಾಗಿದ್ದು, ಶಿಬಿರದ ಮೂಲಕ ಶರೀರ, ಮನಸ್ಸು ಮತ್ತು ಆತ್ಮದ ಸಮತೋಲನವನ್ನು ಸಾಧಿಸುವ ಮಹತ್ವದ ಅರಿವು ನಮಗೆ ದೊರಕಿತು.
- 2025 **ಆಗಸ್ಟ್ 20ರಂದು** ರೋಟರಿ ಕ್ಲಬ್ ಆಶ್ರಯದಲ್ಲಿಗರಡಿ ಮಜಲು ಅಂಗನವಾಡಿ ಕೇಂದ್ರಕ್ಕೆ ಹಂತ ಸೀಡಿ ಮತ್ತು ಗ್ಯಾಸ್ ಸ್ಟೌವ್ ವಿತರಿಸಲಾಯಿತು. ಅಧ್ಯಕ್ಷರು ಹಾಗೂ ರೋಟರಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
- 2025 **ಆಗಸ್ಟ್ 21ರಂದು** ಕಲ್ಯಾಣಪುರ ರೋಟರಿ ಕ್ಲಬ್ ಮತ್ತು ಶ್ರೀ ಮಾದವ ಉಪಾಧ್ಯಾಯರ ಪ್ರಾಯೋಜಕತ್ವದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ತೆಂಕನಿಡಿಯೂರಿನಲ್ಲಿ ಸಂಸ್ಥೆಗೆ ರಾಷ್ಟ್ರಧ್ವಜ ಕಂಬದ ಸುತ್ತ ಇಂಟರ್‌ಲಾಕ್ ಅಳವಡಿಸಿ ಅಧಿಕೃತವಾಗಿ ಉದ್ಘಾಟಿಸಲಾಯಿತು. ಅಧ್ಯಕ್ಷರು ಹಾಗೂ ರೋಟರಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
- 2025ರ **ಆಗಸ್ಟ್ 30 ಮತ್ತು 31 ರಂದು**, ಸಸ್ತಾನದ ಕೊಸ್ಟಲ್ ಪ್ಯಾರಡೈಸ್‌ನಲ್ಲಿ ನಡೆದ **"ಕಲ್ಯಾಣ ಸಂಗಮ** – ಸದಸ್ಯತ್ವ ವೃದ್ಧಿ ಹಾಗೂ ಸಾರ್ವಜನಿಕ ಪ್ರಚಾರ ಕುರಿತ ಜಿಲ್ಲಾ


BEST COMPLIMENTS FROM :

Rtn. NAVEEN KUMAR SHETTY (Partner)
Email : Kifse.udupi@gmail.com
Mob No : 9945631461



Karavali Institute of Fire and Safety

AN ISO- 9001: 2015 & 45001:2018 CERTIFIED INSTITUTE /
Affiliated to BSS – National Development Agency
Promoted By Planning Commission – Govt. Of India
" A MATTER OF QUALITY EDUCATION"
1 St Floor- Raj Tower, Near City Bus Stand Udupi

BEST COMPLIMENTS FROM :

RTN. PHF. M. MAHESH KUMAR
Chairmen
Karnataka State Printers Co-Ordination Committee
Bangalore

SHREE VIGNESHWARA PRINTERS
Printers & Publisher
Sasithota, Malpe - 576 108, Udupi Dist.
Mobile : +91 9845139880
E-mail : vigneshwarapress@gmail.com

BEST COMPLIMENTS FROM :

Rtn. Braan J.S. D'Souza . B.E.(Civil)
Consulting Engineer
L.B. Surveyor & Valuer
Mr. Aaron D'Souza, DCE

NOVA Consultants



Office : Santhekatte, Kallianpur-576105
Resi : "Palmgrove" Kemmannu-576115
Phone : 2546784
Mobile : 98801 72484, 87928 82094
E-mail : dsouzabraan@gmail.com
: aaronblueheart@gmail.com







ರೋಟರಿ ಕ್ಲಬ್ ಉಡುಪಿ ಮಿಡ್‌ಟೌನ್ – ಕಲಾಸಂಗಮ 2025 ಸಾಂಸ್ಕೃತಿಕ ಕಾರ್ಯಕ್ರಮ





ಸಂತೇಕಟ್ಟೆಯ ಶ್ರೀರಾಮ್ ಟವರ್‌ನಲ್ಲಿ, ರೋ. ರಾಮ ಪೂಜಾರಿ ಅವರ 75ನೇ ಜನ್ಮದಿನದ ಅಂಗವಾಗಿ, ವಾರಾಂತರ ಸಭೆಯನ್ನು ಭಾವಪೂರ್ಣವಾಗಿ ಆಯೋಜಿಸಲಾಯಿತು





ರೋಟರಿ ದೀಪಾವಳಿ ಸಂಭ್ರಮ ಮತ್ತು ಕುಟುಂಬ ಸಮ್ಮಿಲನ ಕಾರ್ಯಕ್ರಮ

ಸಮ್ಮೇಳನ" ಎರಡು ದಿನಗಳ ವಿಶೇಷ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು. ಈ ಸಮ್ಮೇಳನವು ಸದಸ್ಯತ್ವ ವೃದ್ಧಿಯ ಪ್ರೇರಣಾದಾಯಕ ವೇದಿಕೆಯಾಗಿದ್ದು, ವಿವಿಧ ಕ್ಲಬ್‌ಗಳಿಂದ ಆಗಮಿಸಿದ ರೋಟೇರಿಯನ್ನರ ಉತ್ಸಾಹಭರಿತ ಭಾಗವಹಿಸುವಿಕೆಯಿಂದ ಬಣ್ಣಗೊಂಡಿತು. ಕಾರ್ಯಕ್ರಮದ ಕೊನೆಯಲ್ಲಿ, ಆಹ್ವಾನಿತ ಗಣ್ಯರಿಗೆ ಸ್ಮರಣಿಕೆಗಳನ್ನು ನೀಡಲಾಗಿದ್ದು, ಸನ್ಮಾನಗಳು ಹಾಗೂ ಧನ್ಯವಾದಗಳೊಂದಿಗೆ ಕಾರ್ಯಕ್ರಮವನ್ನು ಸಮಾರೋಪಗೊಳಿಸಲಾಯಿತು.

- 2025 **ಸೆಪ್ಟೆಂಬರ್ 5ರಂದು**, ರೋಟರಿ ಕ್ಲಬ್ ಕಲ್ಯಾಣಪುರವು ನಮ್ಮ ಸಾಪ್ತಾಹಿಕ ಸಭೆಯ ಅಂಗವಾಗಿ ರೋಟರಿ ಭವನದಲ್ಲಿ **ಶಿಕ್ಷಕರ ದಿನಾಚರಣೆ** ವಿಜೃಂಭಣೆಯಿಂದ ಆಚರಿಸಿತು. ಈ ಸಂದರ್ಭದಲ್ಲಿ **ರೋ. ಸತ್ಯನಂದ ಶೆಟ್ಟಿ** ನಿವೃತ್ತ ಪ್ರಾಧ್ಯಾಪಕರಿಗೆ ಗೌರವ ಸಲ್ಲಿಸಿ, ಅವರ ಶಿಕ್ಷಣ ಕ್ಷೇತ್ರದ ಅಮೂಲ್ಯ ಕೊಡುಗೆಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು. ಇದೇ ಸಭೆಯಲ್ಲಿ, **ಅಪರೂಪದ ಪ್ರತಿಭೆಯ** ಮೂಲಕ ಹೆಸರುವಾಸಿಯಾಗಿರುವ ವಿಶೇಷ **ಚೇತನ ಕೌಶಿಕ್** ಅವರನ್ನೂ ಸನ್ಮಾನಿಸಲಾಯಿತು
- 2025 **ಸೆಪ್ಟೆಂಬರ್ 9 ರಂದು,** ನಮ್ಮ ರೋಟರಿ ಜಿಲ್ಲಾ 3182 ರ ರಸ್ತೆ ಸುರಕ್ಷತಾ ಅಭಿಯಾನ (Road Safety Campaign) ಅಂಗವಾಗಿ ವಿಶೇಷ ಕಾರ್ಯಕ್ರಮವೊಂದನ್ನು ಅಮೃತ ಗಾರ್ಡನ್, ವಟಾರ್ ನಲ್ಲಿ ಏರ್ಪಡಿಸಲಾಗಿತ್ತು.
- 2025 **ಸೆಪ್ಟೆಂಬರ್ 11 ರಂದು** ರಂದು, ಐಡಿಬಿಐ ಬ್ಯಾಂಕ್‌ನ ಸಿಎಸ್‌ಆರ್ (CSR) ಯೋಜನೆಯ ಅಂಗವಾಗಿ, ಉಡುಪಿ ಜಿಲ್ಲೆಯ **ಕಳಾರ್ಕಳ ಬೆಟ್ಟು ಶಾಲೆಗೆ ರೂ. 75,000** ಮೌಲ್ಯದ ಪೀಠೋಪಕರಣಗಳನ್ನು ರೋಟರಿ ಕ್ಲಬ್ ಕಲ್ಯಾಣಪುರ ಸಂಸ್ಥೆಯ ಮೂಲಕ ಹಸ್ತಾಂತರಿಸುವ ಕಾರ್ಯಕ್ರಮವನ್ನು ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು.
- 2025 **ಸೆಪ್ಟೆಂಬರ್ 11 ರಂದು** ಗುರುವಾರ **"ಕಲ್ಯಾಣ ಸಂಗಮ"** ಜಿಲ್ಲಾ ಸಮ್ಮೇಳನದ ಅಂಗವಾಗಿ ವಾರಾಂತ್ಯದ ಸಭೆಯಲ್ಲಿ **ಅಭಿನಂದನಾ ಹಾಗೂ ಕೃತಜ್ಞತಾ ಕಾರ್ಯಕ್ರಮವನ್ನು** ಆಯೋಜಿಸಲಾಗಿದ್ದು, ಕುಟುಂಬೋತ್ಸವವೂ ಸಂತಸದ ಪರಿಸರದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.
- 2025 **ಸೆಪ್ಟೆಂಬರ್ 11ರಂದು** ರೋಟರಿ ಕ್ಲಬ್ ಕಲ್ಯಾಣಪುರವು ಎಂಜಿನಿಯರ್ಸ್ ದಿನಾಚರಣೆಯ ಅಂಗವಾಗಿ **"ಇತ್ತೀಚಿನ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಸುರಕ್ಷಿತವಾಗಿರಿ"** ಶೀರ್ಷಿಕೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ರೋಟರಿ ಭವನದಲ್ಲಿ ಯಶಸ್ವಿಯಾಗಿ ಆಯೋಜಿಸಿತು. ಮುಖ್ಯ ಅತಿಥಿ **ಶ್ರೀ ಎರ್. ಪುಷ್ಕರ್ ರಾಣಡೆ**, 30 ವರ್ಷಗಳ ಅಂತಾರಾಷ್ಟ್ರೀಯ ಅನುಭವದೊಂದಿಗೆ, **ಡಿಜಿಟಲ್ ಬ್ಯಾಂಕಿಂಗ್ ಮತ್ತು ಸೈಬರ್ ಸುರಕ್ಷತೆ** ಕುರಿತು ಮಹತ್ವಪೂರ್ಣ ಮಾಹಿತಿ ಹಂಚಿದರು.

- 2025 **ಸೆಪ್ಟೆಂಬರ್ 20 ರಂದು** ರೋಟರಿ ಕ್ಲಬ್ ಕಲ್ಯಾಣಪುರ ವತಿಯಿಂದ ಆಯೋಜಿಸಲಾದ **ವಿಶ್ವ ಕಾರಾವಳಿ ಸ್ವಚ್ಛತಾ ದಿನದ ಕಾರ್ಯಕ್ರಮವು** ಕಾಪು ಬೀಚ್‌ನ ಲೈಟ್ ಹೌಸ್ ಬಳಿ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮವು ಸಮುದ್ರ ತೀರದ ಪರಿಸರವನ್ನು ಶುದ್ಧವಾಗಿಡುವ ಉದ್ದೇಶದಿಂದ ಜರುಗಿತು.
- 2025 **ಅಕ್ಟೋಬರ್ 9 ರಂದು** ರೋಟರಿ ಕ್ಲಬ್ ಕಲ್ಯಾಣಪುರವು ವಾರದ ಸಭೆಯೊಂದಿಗೆ **ಝೋನಲ್ ರಿವ್ಯೂ ಮೀಟ್** ಯಶಸ್ವಿಯಾಗಿ ರೋಟರಿ ಭವನ, ಸಂತೆಕಟ್ಟೆಯಲ್ಲಿ ಆಯೋಜಿಸಿತು. ಜೋನ್ 3 ರ ರೋಟೇರಿಯನ್ ಪಿಎಚ್‌ಎಫ್ ಆನಂದ ಶೆಟ್ಟಿ ಎಜಿ ಅವರು ಸಭೆಯನ್ನು ನೇತೃತ್ವವಹಿಸಿದ್ದರು. ಸಭೆಯಲ್ಲಿ ಝೋನ್ 3 ಒಳಗಿನ ವಿವಿಧ ಕ್ಲಬ್‌ಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದರು.
- **2025 ಅಕ್ಟೋಬರ್ 9 ರಂದು ಸೆಪ್ಟೆಂಬರ್ ತಿಂಗಳ ಮಾಸಿಕ ಬುಲೆಟಿನ್** ಅನ್ನು **ರೋ. ನವೀನ್ ಕುಮಾರ್ ಶೆಟ್ಟಿ** ಅವರು ಸಿದ್ಧಪಡಿಸಿದ್ದು, ಅದನ್ನು ನಮ್ಮ ಸಹಾಯಕ ಗವರ್ನರ್ ರೋ. ಆನಂದ್ ಶೆಟ್ಟಿ ಅವರು ಅನಾವರಣಗೊಳಿಸಿದರು.
- **2025 ಅಕ್ಟೋಬರ್ 10,** ರಂದು ರೋಟರಿ ಕ್ಲಬ್ ಕಲ್ಯಾಣಪುರವು ಕಟ್ಟಲಾ ಗ್ರಾಮದ ಕುಕ್ಕುಜೆಯಲ್ಲಿ ವಾಸಿಸುತ್ತಿರುವ **ಶ್ರೀಮತಿ ಗುಲಾಬಿ ಅವರಿಗೆ ವೀಲ್‌ಚೇರ್‌ನ್ನು ಹಸ್ತಾಂತರಿಸಿ**, ಅವರ ದೈನಂದಿನ ಜೀವನವನ್ನು ಸುಲಭಗೊಳಿಸಲು ಸಹಾಯ ಮಾಡಿತು.
- 2025 **ಅಕ್ಟೋಬರ್ 19ರಂದು** ರೋಟರಿ ಕ್ಲಬ್ ಉಡುಪಿ ಮಿಡ್‌ಟೌನ್ ಆಯೋಜಿಸಿದ್ದ ಝೋನಲ್ ಲೆವೆಲ್ ಸಾಂಸ್ಕೃತಿಕ ಸ್ಪರ್ಧೆ **"ಕಲಾಸಂಗಮ – 2025"** ಹೋಟೆಲ್ ಬ್ರಹ್ಮಾವರದಲ್ಲಿ ಭವ್ಯವಾಗಿ ಮತ್ತು ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ನಮ್ಮ ಎಲ್ಲಾ ಸದಸ್ಯರು, ಅನ್ಸ್, ಅನ್ನ್ಯಾಟ್ಸ್ ಮತ್ತು ಮಕ್ಕಳೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- 2025 **ಅಕ್ಟೋಬರ್ 16ರಂದು** ಸಂತೇಕಟ್ಟೆಯ ಶ್ರೀರಾಮ್ ಟವರ್‌ನಲ್ಲಿ ರೋ. ರಾಮ ಪೂಜಾರಿ ಅವರ 75ನೇ ಜನ್ಮದಿನದ ಅಂಗವಾಗಿ ನಮ್ಮ ರೋಟರಿ ಕ್ಲಬ್ ವಾರಾಂತ್ಯ ಸಭೆಯನ್ನು ಭಾವಪೂರ್ಣವಾಗಿ ಆಯೋಜಿಸಿತು. ಅವರು ಅಂಗವೈಕಲ್ಯ ವಿದ್ಯಾರ್ಥಿ ಶ್ರೀ ಸೋಹನ್ ಮತ್ತು ಭರತನಾಟ್ಯ ಕಲಾವಿದೆ ಕುಮಾರಿ ಸಾನ್ವಿ ಅವರನ್ನು ಗೌರವಿಸಿದರು.
- 2025 **ಅಕ್ಟೋಬರ್ 25ರಂದು** ಸಂಜೆ 6:30ಕ್ಕೆ Rtn. ಅರುಣ್ ಡಿಸೋಜಾ ಅವರ Green Acres ನಿವಾಸದಲ್ಲಿ ನಡೆದ ರೋಟರಿ ದೀಪಾವಳಿ ಸಂಭ್ರಮ ಮತ್ತು ಕುಟುಂಬ ಸಮ್ಮಿಲನ ಕಾರ್ಯಕ್ರಮ ಉತ್ಸಾಹಭರಿತವಾಗಿ ಮತ್ತು ಯಶಸ್ವಿಯಾಗಿ ಆಯೋಜಿಸಲಾಯಿತು.





ಇಂಜಿನಿಯರ್ ದಿನಾಚರಣೆಯ ಅಂಗವಾಗಿ ಡಿಜಿಟಲ್ ಬ್ಯಾಂಕಿಂಗ್ ಜಾಗೃತಿ ಕಾರ್ಯಕ್ರಮ




ರೋಟರಿ ಕ್ಲಬ್– ವಿಶ್ವ ಕಾರಾವಳಿ ಸ್ವಚ್ಛತಾ ದಿನಾಚರಣೆ - ಕಾಪು ಬೀಚ್





ರೋಟರಿ ಕ್ಲಬ್ ಕಲ್ಯಾಣಪುರ ಆಯೋಜಿಸಿದ ಝೋನಲ್ ರಿವ್ಯೂ ಮೀಟ್



ರೋಟರಿ ಕ್ಲಬ್ ಕಲ್ಯಾಣಪುರದ ವತಿಯಿಂದ- ಶ್ರೀಮತಿ ಗುಲಾಬಿ ಅವರಿಗೆ ವೀಲ್‌ಚೇರ್‌ನ್ನು ಹಸ್ತಾಂತರಿಸಲಾಯಿತು






ಶಿಕ್ಷಕರ ದಿನಾಚರಣೆ – 5 ಸೆಪ್ಟೆಂಬರ್ 2025





ಸೆಪ್ಟೆಂಬರ್ 9 ರಂದು, ನಮ್ಮ ರೋಟರಿ ಜಿಲ್ಲಾ 3182 ರ ರಸ್ತೆ ಸುರಕ್ಷತಾ ಅಭಿಯಾನ





ಕಳಾರ್ಕಳ ಬೆಟ್ಟು ಶಾಲೆಗೆ ಪೀಠೋಪಕರಣ ವಿತರಣಾ ಕಾರ್ಯಕ್ರಮ







"ಕಲ್ಯಾಣ ಸಂಗಮ – ಅಭಿನಂದನಾ ಹಾಗೂ ಕೃತಜ್ಞತಾ ಸಭೆ






2025-26 ಸಾಲಿನ ಪದಪ್ರಧಾನ ಸಮಾರಂಭವು 03 ಜುಲೈ 2025 ಅಮೃತ್ ಗಾರ್ಡನ್‌ನಲ್ಲಿ





ಟಿ.ಎಂ.ಎ. ಪೈ ಹೈಸ್ಕೂಲ್‌ನಲ್ಲಿ ಇಂಟರಾಕ್ಟ್ ಕ್ಲಬ್ ಸಹಯೋಗದೊಂದಿಗೆ ವನಮಹೋತ್ಸವ ಕಾರ್ಯಕ್ರಮ





ಸಂತ ಜೋಸೆಫ್ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ "ಪುಸ್ತಕ ವಿತರಜೆ ಕಾರ್ಯಕ್ರಮ





ಗುರುಪೌರ್ಣಿಮೆಯ ಅಂಗವಾಗಿ ಲಕ್ಷ್ಮಿ ಟೀಚರ್ ಅವರಿಗೆ ಗೌರವ




ಆರೋಗ್ಯ ಸಪ್ತಾಹ ಕಾರ್ಯಕ್ರಮದ ದೃಶ್ಯಾವಳಿ




79ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು 'ಆಟಿಡು ಒಂಜಿ ದಿನ' ಕಾರ್ಯಕ್ರಮ"




ರಕ್ತದಾನ ಶಿಬಿರ ಹಾಗೂ ರಕ್ತ ಮಾದರಿ ಪರೀಕ್ಷೆ ಯಶಸ್ವಿ ಆಯೋಜನೆ




ನಮ್ಮ ಆರೋಗ್ಯ ಸಪ್ತಾಹದ ಭಾಗವಾಗಿ ಆಯೋಜಿಸಲಾದ ಯೋಗ ಶಿಬಿರ ಯಶಸ್ವಿಯಾಗಿ ಪೂರ್ಯೆಸಿದೆ




ರೋಟರಿ ಕ್ಲಬ್ ವತಿಯಿಂದ ಗರಡಿ ಮಜಲು ಅಂಗನವಾಡಿ ಕೇಂದ್ರಕ್ಕೆ ನೆರವು





ನಮ್ಮ ಆರೋಗ್ಯ ಸಪ್ತಾಹದ ಭಾಗವಾಗಿ ಆಯೋಜಿಸಲಾದ ಶಿಬಿರ ಯಶಸ್ವಿಯಾಗಿ ಪೂರ್ಯೆಸಿದೆ




ಸರಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ತೆಂಕನಿಡಿಯೂರು,




ಆಗಸ್ಟ್ 30 ಮತ್ತು 31 ರಂದು, ಸಸ್ತಾನದ ಕೊಸ್ಟಲ್ ಪ್ಯಾರಡೈಸ್‌ನಲ್ಲಿ ನಡೆದ "ಕಲ್ಯಾಣ ಸಂಗಮ